ನಟಿಸಿದ.

ಪಾಪು ಅವನ ಕಿವಿಯಲ್ಲಿ ಅದೇನೊ ಉಸುರಿದಳು. ಮಕ್ಕಳಿಗೆ ಹೇಗೆ ಗುಟ್ಟು ಮಾಡುವುದು ಇಷ್ಟವಾಗುವುದು ಸಹಜ. ಪಾಪು ಅವನ ಕಿವಿಯಲ್ಲಿ ಅದೇನೊ ಹೇಳಿ ಜೋರಾಗಿ ನಕ್ಕಳು. ಪ್ರಸಾದನೂ ನಗುತ್ತಾ ಗಂಗೆಯನ್ನೇ ನೋಡುತ್ತ ಪಾಪೂಗೆ ಹೇಳಿದ.

'ಏನೇ ತುಂಟೀ... ಹೀಗೇ ನನ್ನ ಮೇಲೂ ಯಾರ್‍ದಾದರೂ ಕಿವೀಲಿ ಹಾಸ್ಯ ಗುಟ್ಟಾಗಿ ಮಾಡ್ತೀ ಏನು...?'

'ಇಲ್ಲಪ್ಪಾ ಇಲ್ಲ... ಆದ್ರೆ ನಾಳೆ ಬಂದ್ರೆ ಮಾತ್ರ...!'

'ಬರ್‍ತಿದ್ರೆ..?'

ಇವರ ಈ ತುಂಟಾಟದ ಮಾತುಕತೆಯಾಗುತ್ತಿದ್ದ ವೇಳೆ ಶಿವಣ್ಣ ಇಲ್ಲಿಗೇ ಸಮೀಪಕ್ಕೇ ಬಂದುಬಿಟ್ಟ.

'ಏನು ಪ್ರಸಾದಪ್ಪಾ...? ಇಷ್ಟು ಮುಂಜಾನೆಲಿ ಇಲ್ಲಿ ಬಂದು ಇವ್ರ ಬಳಿ ಏನು ಮಾಡ್ತಿದೀರಾ...? ಛಲೋ ಆತು... ಬೆಳಗಿನ ಜಾವ ಹೊರಗೆ ಬಂದ್ರೆ ಒಳ್ಳೆ ಹವೆ ಸಿಗ್ತದೆ... ನಿಮ್ಮ ಆರೋಗ್ಯಕ್ಕೂ ಒಳಿತು...!'

ಗಂಗ ತಕ್ಷಣ ಮಗಳ ಕೈ ಎಳೆದುಕೊಂಡು 'ಓ...! ಬಸ್ಸು ಬರ್‍ಲಿಕ್ ಹತ್ಯಾದ್ರಿ... ನಡಿ..., ಬ್ಯಾಗ ಹೋಗೂಣ...' ಎಂದು ಸರ ಸರ ಹೊರಟುಬಿಟ್ಟಳು.

ಶಿವಣ್ಣನ ಕಾಲು ಭದ್ರವಾಗಿ ಅಲ್ಲೇ ನಿಂತಿದ್ದರೂ, ಕಣ್ಣುಗಳು ಮಾತ್ರ ಅವರ ಹಿಂದೆಯೇ ಓಡಿತು!

* * *

## ಗಂಗೆಯ ಆತಂಕ

ಪ್ರಸಾದ ನವೆದು ಹೋಗುತ್ತಿರುವುದು ಕಂಡ ಗಂಗೆಗೆ ಆಘಾತವೇ ಆಗಿತ್ತು. ಎಷ್ಟು ನಿಶ್ಶಕ್ತನಾಗಿದ್ದಾನೆಂದರೆ ಮಗುವಿನಂತೆ ಅವನನ್ನು ಪಾಲಿಸಬೇಕು ಎಂಬ ಮಾತೃಭಾವ ತುಂಬಿಕೊಂಡು. ಅವನ ದನಿ ಮಾತ್ರ ಇನ್ನೂ ಅದೇ ಆಕರ್ಷಣೆ ಇಟ್ಟುಕೊಂಡಿದೆ. ಅವನ ದನಿ ಮರುಳು ಮಾಡುವಂತಹದ್ದು. ಈ ಕಡ್ಡಿಯ ಚಪ್ಪರದಂತಾಗಿರೊ ಶರೀರದ ಚೌಕಟ್ಟಿನಲ್ಲಿ ಅವನ ದನಿ ಮಾತ್ರ ತನ್ನ ಎಂದಿನ ಜೀವಂತಿಕೆ ಉಳಿಸಿಕೊಂಡಿತ್ತು. ಶರೀರ ಶಿಥಿಲವಾಗಿದ್ದರೂ ಶಾರೀರ ಮಾತ್ರ ಹಿಂದಿನಂತೆಯೇ ರಸ ತುಂಬಿಕೊಂಡಿತ್ತು. ಆ ಶಿಥಿಲ ದೇಹದ ಆರೋಗ್ಯ ಕಾಪಾಡುವುದರ ಜವಾಬ್ದಾರಿ ತಾನು ತೆಗೆದುಕೊಳ್ಳಬೇಕು ಎಂದುಕೊಂಡಳು. ಅರಿಶಿಣ, ಹೂವು, ಮಂಗಳವಾದ್ಯ, ಅಗ್ನಿ, ಮಂಗಳಸೂತ್ರದೊಂದಿಗೆ ನೆಂಟರಿಷ್ಟರ ಸಮಕ್ಷಮದಲ್ಲಿ ನಡೆಯುವ ಪವಿತ್ರ ಬಂಧನವನ್ನು ಈಗ ಇದೆಲ್ಲದಕ್ಕಿಂತ ಬಲವಾದೊಂದು ಬಂಧನದಲ್ಲಿ ಬೆಸೆಯಬೇಕಾಗಿದೆ.

ಇಷ್ಟು ವರ್ಷ ಬಂದಿತು, ಹೋಯಿತು. ಆದರೆ ಈ ಹೊಸ ರೀತಿ ಆಲೋಚನೆ ಅವಳಿಗೆ ಬಂದಿರಲಿಲ್ಲ. ತನ್ನ ಮಗಳನ್ನು ಕಾಪಿಡುವುದೊಂದೇ ಗುರಿ ಇತ್ತು. ಈಗ ಅವಳದ್ದೆಲ್ಲಾ ಒಂದು ನೆಲೆಗೆ ಬಂದಾದ ಮೇಲೆ, ಆ ಜಾಗದಲ್ಲಿ ಮತ್ತಿನ್ನೇನೊ ಆಲೋಚನೆ ಬಂದು ಸೇರಿಕೊಳ್ಳುತ್ತಿದೆ. ಜನನಿಂದೆಗಾಗಿ ಹೆದರುತ್ತ, ಮನದೊಳಗೆ ಕೊರೆಯುತ್ತಿದ್ದ ಅಪರಾಧ ಪ್ರಜ್ಞೆಯ ನೋವನ್ನು ತಾನೇ ಧೈರ್ಯವಾಗಿ ನಿಂತು ಹೊಡೆದೋಡಿಸಿಬಿಡಬೇಕು. ಸುತ್ತಲ ಜಗತ್ತು ಬದಲಾಗುತ್ತಲಿದೆ. ಹೆದರುವ ಬದಲಾಗಿ ನ್ಯಾಯದ ನಿಷ್ಠೆಯಲ್ಲಿ ನಿಂತು, ಪ್ರೀತಿಯ ಶಕ್ತಿ ತೋರಗೊಡಬೇಕು. ಗಟ್ಟಿಗತನವನ್ನು ಹೊಸತರಲ್ಲಿ ನಿಂದಿಸಿದರೂ ಕಾಲಕ್ರಮೇಣ ಒಪ್ಪಿಕೊಂಡು ಬಿಡುವರು. ಇಷ್ಟು ಕಾಲದ್ದನ್ನೇ ಮುಂದುವರಿಸಿದರೆ ನಿಜಕ್ಕೂ ಬಾಳಿನ ಕೊರತೆ ನೀಗುವುದೇ ಇಲ್ಲ. ಇದರಿಂದ ಸಾಧಿಸುವುದು ತಾನೇ ಏನಿದೆ?

ಅವಳ ಈ ನಿರ್ಧಾರದಿಂದ, ತಗ್ಗಿ ನಡೆದ ತಲೆ ಎತ್ತಿ ಭವಿಷ್ಯವನ್ನು ಧೈರ್ಯದಿಂದ ನೋಡುವಂತಾಯಿತು. ಕಾಲ ಕ್ರಮೇಣ ಜನ ಅವಳನ್ನೇ ಅಸ್ಪೃಶ್ಯ ರೀತಿಯಲ್ಲಿ ನೋಡುವುದನ್ನು ಬಿಟ್ಟುಕೊಟ್ಟಿದ್ದಾರೆ. ಗಂಗೆ ತಲೆ ಸಹಾ ಎತ್ತದೆ, ಸದಾಕಾಲ ಏನಾದರೊಂದು ಒಳ್ಳೆ ಕಾರ್ಯ ಹಿಡಿದು ಅದನ್ನು ನಿಷ್ಠೆಯಿಂದ ಮಾಡಿ ಮುಗಿಸುವುದು, ಗಂಡಸರೊಡನೆ ಸಲುಗೆ ತೋರದೆ ಒಂದು ಸನ್ಯಾಸಿಯಂತೆ ಇರುವುದನ್ನು ಕಂಡು ಮೆಚ್ಚಿಕೊಂಡಿದ್ದಾರೆ. ಏನಾದರೊಂದು ಕೆಲಸವಿದ್ದರೆ ಮನೆಗೆ ಕರೆಯುವುದೂ ಉಂಟು. ಬಾಣಂತಿ, ಮಗೂಗೆ ನೀರು ಹಾಕಲು, ಹಬ್ಬ ಮದುವೆಗಳಲ್ಲಿ ಕೆಲಸ ಅಂಟಿಸುತ್ತಿದ್ದರು. ಇದೆಲ್ಲಕ್ಕೂ ಸಹಕರಿಸಿ ಆಕೆ ಜನ ಮನ್ನಣೆ ಪಡೆದಿದ್ದಳು. ಇದೆಲ್ಲಕ್ಕಿಂತ ಮುಖ್ಯವಾಗಿ ಈಗ ಸಮಾಜ ಶೀಘ್ರವಾಗಿ ಬದಲಾಯಿಸಲಾರಂಭಿಸಿತ್ತು. ಎಷ್ಟೋ ಸಮಯ ಅವರವರ ಮಕ್ಕಳೇ ತಮಗೆ ವಿರುದ್ಧ ನಿಂತು ತಮ್ಮ ನಿರ್ಧಾರ ತಾವೇ ತೆಗೆದುಕೊಂಡು ಪ್ರೇಮ ವಿವಾಹವನ್ನು ಜಾತಿಯ ಕಟ್ಟಲೆ ಮೀರಿ ಮಾಡಿಕೊಂಡು ಬಿಡುವುದೂ ಇತ್ತು. ಈ ಬದಲಾವಣೆಯಿಂದಾಗಿ ಹಿರಿಯರಿಗೆ 'ದಾರಿ ತಪ್ಪಿದ' ಗಂಗೆಯ ಮೇಲೆ ಅಪರಾಧ ಹೊರಿಸುವ ಶಕ್ತಿಯೇ ಹೋಗಿಬಿಟ್ಟಿತು.

ಗಂಗೆ, ಸಮಾಜದ ಬದಲಾವಣೆಯನ್ನು ದೇವಸ್ಥಾನಕ್ಕೆ ಕ್ಷಿಪ್ತವಾಗಿ ಬರುತ್ತಲಿದ್ದ ಕೆಲವು ಮಹಿಳಾ ಮಣಿಗಳಿಂದಲೇ ಕೇಳಿ ತಿಳಿದುಕೊಳ್ಳುತ್ತಿದ್ದಳು. ಈ ಗುಂಪಿನ ಮಹಿಳೆಯರು ಬರುತ್ತಿದ್ದದ್ದು ದೇವರ ದರ್ಶನ, ಕಾಲಕ್ಷೇಪದ ನೆವವಾಗಿದ್ದರೂ ಅವರಿಗೆ ದೇವಾಲಯ ಒಂದು ಮನೋರಂಜನೆ ಕೇಂದ್ರ! ಊರಿನ ಕಾಡು ಹರಟೆ ಒತ್ತಿಯನ್ನೆಲ್ಲಾ ಬಿಚ್ಚಿಟ್ಟು ತೃಪ್ತಿಪಡೆದುಕೊಳ್ಳುತ್ತಿದ್ದರು. ಬ್ರಾಹ್ಮಣ ಹುಡುಗಿ ದಲಿತನನ್ನು ಮದುವೆಯಾದದ್ದು, ಇನ್ಯಾವಳೋ ವಿಚ್ಛೇದನ ಮಾಡಿಕೊಂಡದ್ದು, ಕುಡುಕ ಗಂಡನ ಹುಚ್ಚಾಟ, ಜೂಜಾಡಿ ಆಸ್ತಿ ಕಳಕೊಂಡವ, ಮದುವೆ ಆಗದೇ ಗರ್ಭಿಣಿಯಾಗಿ ಹತ್ತಿರದ ಆಸ್ಪತ್ರೆಯಲ್ಲಿ ಗರ್ಭ ತೆಗೆಸಿಕೊಂಡ ಕಾಲೇಜು ಹುಡುಗಿ...

ಹೀಗೆ ತಮಗೇನೂ ಸಂಬಂಧಪಡದ ಕಸದ ಕಂತೆಯನ್ನು ಬಿಚ್ಚಿಡಲು ಅವರಿಗೆ ದೇವಸ್ಥಾನ ಒಳ್ಳೆ ಸ್ಥಾನವಾಗಿಬಿಟ್ಟಿತ್ತು. ಈ ಬೂಟಾಟಿಕೆ ಭಕ್ತರ ಬಾಯಿಂದ ಕಥೆಗಳನ್ನು ಕೇಳುವಾಗ ಗಂಗೆಗೆ ಗಂಡನಿಲ್ಲದೆ ಹಡೆದ ಕೂಸಿನ ಬಗ್ಗೆಯೂ ಜನ ಹೀಗೇ ಏನೇನು ಬಣ್ಣ ಬಣ್ಣದ ವಿವರಣೆ ಕೊಟ್ಟು ಮಾತಾಡಿರಬಹುದು ಅನ್ನಿಸಿತು. ಆದರೆ ತನ್ನ ದಿಟ್ಟತನ ಈಚಿನ ದಿನಗಳಲ್ಲಿ ವಿಚಿತ್ರವೇನೂ ಅಲ್ಲ ಎಂಬ ಒಂದು ಧೈರ್ಯವೂ ಉದಯಿಸಿತು. ತಾನೂ ತನ್ನ ಮಗಳನ್ನು ಗಟ್ಟಿಗಿತ್ತಿಯಾಗುವಂತೆ ಓದಿಸಬೇಕು, ಯಾರನ್ನು ಬೇಕಾದರೂ ಇಷ್ಟಪಟ್ಟು ಮದುವೆ ಮಾಡಿಕೊಂಡು ಸುಖಿಯಾಗಬೇಕು... ಇದೆಲ್ಲ ಆಗ ಬೇಕಾದರೆ ತಾನವಳಿಗೆ ಒಳ್ಳೆ ಆಸರೆ ಕೊಡಬೇಕು. ತುಂಬಾ ಓದಿಸಬೇಕು... ವಿಮಾನದಲ್ಲಿ ತಿರುಗಾಡುವಂತಹ ದೊಡ್ಡ ಆಫೀಸರು ಅವಳಾಗಬೇಕು. ಅವಳ ಬಾಳ್ವೆ ತನ್ನಂತೆ ಆಗಬಾರದು...

ತನ್ನ ಬಾಳಲ್ಲಿ ಬಂದ ಶಿವಣ್ಣನಂತಹವನು ಇಂದ್ರಾ ಗಾಂಧಿ ಗಂಡನಾಗ ಬಾರದು... ಪ್ರಸಾದಪ್ಪನಂತಹ ಗಂಡು ಅವಳಿಗೆ ದೊರಕಬೇಕು...

'ಪಾಪ...!' ಪ್ರಸಾದನನ್ನು ನೆನೆದಾಗ ಅವಳ ಕರುಳು ನುಲಿದಂತೆ ಆಯಿತು. ಹೀಗೇ ಇದ್ದರೆ ಆತನಿಗೆ ಹುಚ್ಚೇ ಹಿಡಿಯಬಹುದೇನೊ... ಇಲ್ಲವೇ ಕೊರಗಿ ಪ್ರಾಣವನ್ನೇ ಕಳೆದುಕೊಂಡುಬಿಡಲೂ ಬಹುದೇನೊ...!

ಕ್ಷೀಣಿಸುತ್ತಿರುವ ಅವನ ದೇಹಸ್ಥಿತಿಗೆ ಶಿವಣ್ಣ ಮತ್ತಷ್ಟು ಕಾರಣನಾಗುತ್ತಿದ್ದಾನೆ ಎನ್ನಿಸಿತು. ತನ್ನ ಮಗಳ ಗಂಟಲ ಬೇನೆ ಗುಣಪಡಿಸಿದವನನ್ನು ಗಂಗೆ ಪ್ರಸಾದನ ವಿಚಾರದಲ್ಲಿ ನಂಬಲಿಲ್ಲ. ಶಿವಣ್ಣ ಮರೆಮಾಚಿಟ್ಟುಕೊಂಡ ಅಸೂಯೆ ಜ್ವಾಲೆಯ ಬಿಸಿಯಿಂದ ಪ್ರಸಾದನನ್ನು ನಿಧಾನವಾಗಿ ಸುಡುತ್ತಿದ್ದಾನೆ ಅನ್ನಿಸಿತ ವಳಿಗೆ. ಈ ಅಪಾಯದಿಂದ ಪ್ರಸಾದನನ್ನು ಈಚೆಗೆ ತರಬೇಕು. ಅದಕ್ಕಾಗಿ ಹಾದಿ ಕಂಡುಕೊಳ್ಳಲು ಶಿವಣ್ಣನನ್ನೇ ಭೇಟಿಯಾಗಲೇಬೇಕು ಎಂದುಕೊಂಡು, ಆ ಸಮಯಕ್ಕಾಗಿ ಹೊಂಚು ಹಾಕತೊಡಗಿದಳು.

ಅಂತಹ ಅವಕಾಶ ಬೇಗನೇ ದೊರಕಿತು. ಒಂದು ಭಾನುವಾರ ಇಂದ್ರಾಗಾಂಧಿಗೆ ತಲೆಗೆ ನೀರೆರೆದು, ಕೇಶ ಒಣಗಿಸಲು ಅರಸರ ಬಂಗ್ಲೆ ವಿಶಾಲ ಕಾಂಪೌಂಡಿನಲ್ಲಿ ಅವಳ ಜೊತೆ ಅಡ್ಡಾಡುತ್ತಿದ್ದಳು. ಆ ಬಂಗ್ಲೆ ಒಂದು ಸಣ್ಣ ಅರಮನೆಯೇ ಆಗಿತ್ತು. ಆದರೀಗ ನೋಡಿಕೊಳ್ಳುವವರು ಸರಿ ಇಲ್ಲದೇ ಬಂಗ್ಲೆ ಮತ್ತು ಹೂತೋಟ ಪಾಳು ಬಿದ್ದಂತಿತ್ತು. ಹಿಂದೆ ಎಂದೋ ನೆಟ್ಟ ನೆಲ್ಲಿ, ಮಾವು, ನಿಂಬೆ, ಅಗಸೆ, ಹಲಸು ಮರಗಳೊಂದಿಗೆ ಕೆಲವು ಕಳೆ ಸಸ್ಯಗಳೂ ಮಳೆ ಬಿದ್ದಾಗ ಪುನರ್ ಜೀವ ಪಡೆದು ಬಿಡುತ್ತಿತ್ತು. ಹಿಂದಿದ್ದ ನಾಗದಾಳೆ, ಒಂದೆಲಗ, ತುಂಬೆ, ಲೋಳೆಸರ, ದೊಡ್ಡಪತ್ರೆ ಮುಂತಾದವು ತಾವೇ ತಮ್ಮ ಸಂತಾನ ಕಾಪಾಡಿಕೊಂಡಿದ್ದವು. ಅದರದರ ಒಣ ಎಲೆಯೇ ಅವಕ್ಕೆ ಗೊಬ್ಬರ. ವರುಣಧಾರೆಯೇ ಮಾಲಿ, ಶ್ರಾವಣ ಮಾಸ ಬಂದರೆ ಮರ, ಬಳ್ಳಿ, ಗಿಡವೆಲ್ಲಾ ಹಸಿರುಡುಗೆ ತೊಟ್ಟು ಬಿಡುವವು. ಇವುಗಳಲ್ಲದೆ, ದಾಸವಾಳ, ಗುಲಾಬಿ, ಸ್ಫಟಿಕ, ನಂದಿಬಟ್ಟಲು, ಮಲ್ಲಿಗೆ, ಪಾರಿಜಾತ, ಸೇವಂತಿಗೆ, ಸಂಪಿಗೆ ಹೂಗಳು ಕಾಲ ಕಾಲಕ್ಕೆ ಹೂಗಳನ್ನು ಬಿಡುತ್ತಿದ್ದವು.

(ಸಶೇಷ)